ಬಿಂದಗಿ ಬಗ್ಯಾಗಿ ಬರತಕ್ಕ ಸುಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬ್ಯೈ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಅಕ್ಕಮ್ಮಬಸಮ್ಮ ಇವರ ಅರ್ಜೀಯನ್ನು 1885ನೇ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 10ರಲ್ಲು ಕೇಳಿ ಸರಟಿಫಿಕೇಟಿ ಪಡಿಯತಕ್ಕ ಬಾಧ್ಯತೆಯು ವಿಮರ್ಸೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಂಜಪ್ಪ ಕಬಿಸಪ್ಪ ಇವರ ಆಸ್ತಿಗೆ ಹಕ್ಕುದಾರರಾದ ವಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1885ನೇ ಇಸವಿ ಆಗಸ್ಟ್ಟ ತಿಂಗಳು 7ನೇ ತಾರಿಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಜನೆ ಕೊಡೋಣಾಗಿಧೆ.

ಸಿ. ಕ್ರೈಸ್,
ಸಬ ಜಡ್ಜ.

ಬೆಂಗಳೂರು ಸೆಂಟ್ರಲ್ ಜೈಲ್.

ತಾರೀಖು 9ನೇ ಆಗಸ್ಟು 1885.

1885ನೇ ಇಸವಿ ಆಗಸ್ಟು ತಾರೀಖು 8ನೇ ಶನಿವಾರದ ದಿವಸ ಸೆಂಟ್ರಲ್ ಜೆಯಿಲ್ ತೋಟದಿಂದ ಫರಾರಿಯಾದ ಖೈದಿಯ ಜಹರೆಪಟ್ಟಿ.

ಜೈಲ್ ನಂಬರ್—7070. ಹೆಸರು ತಂದೆ ಹೆಸರು—ತಿಪ್ಪಿಗಾಡು ಯಂಬುವನ ಮಗ ನರಸಿಗ. ವರ್ತ—ಬಾಗೇನಹಳ್ಳಿ ತಾಲ್ಲೂಕು ದೇವರಾಜನವಲ್ಲಿ. ಜಾತಿ ಕಸಬು—ಪೇಡರ್ ಕೂಲಿ. ವಯಸ್ಸು ಯತ್ತರ—22 ವರುಷ 5 ಅಡಿ 3 ಅಂಗುಲ. ತಕಸೀರು ಸಜಾ ತಾರೀಖು ವಾಯಿದೆ ವಗೈರೆ—ಜೋರಿ ಯಿರಾದೆಯಿಂದ ರಾತ್ರೆ ಮನೆನುಗ್ಗಿದ ತಕಸೀರಿಗೆ 1885ನೇ ಇನವಿ ಜುಲೈ ತಾರೀಖು 15ರ ಲಾಗಾಯಿತು 6 ತಿಂಗಳು ಕಠಿಣ ಸಜಾ. ಸಜಾ ಕೊಟ್ಟ ಕೋರ್ಟು—ಕೋಲಾರದ ಜನರಲ್ ಅ|| ಕಮ್ಮಿಷನರವರ ಕೋರ್ಟು ಕೇಸ್ ನಂಬರ್ 31 ರಲ್ಲು. ಚಹರೆ ತಪಸೀಲ್—ಹೊಟ್ಟೆ ಮೇಲೆ 6 ಮಚ್ಚೆಗಳು, ಯಜತೊಡೆ ಪೊಳಪಾರ್ಶ್ವ 3, ಹೊರಪಾರ್ಶ್ವ 1 ಮಚ್ಚೆ, ಬಲಭುಜದ ಮೇಲೆ 2, ಯದೆಯ ಬಲಭಾಗದಲ್ಲಿ 3 ನೆರಹುಲಿಗಳಿವೆ. ಖೈದಿ ಉಡುಪಿನ ತಪಸೀಲು—ಖೈದಿ ಫರಾರಿ ಕಾಲದಲ್ಲಿ ಮೈಮೇಲೆ ಬಂದು ಚಡ್ಡಿ ಬಂದು ಟೋಪಿ ಇತ್ತು. ಷರಾ—ಫರಾರಿ ಖೈದಿಯನ್ನು ವಸ್ತಗಿರಿ ಮಾಡಿದವರಿಗೆ 20 ರೂಪಾಯಿ ಇನಾಂ ಕೊಡಲ್ಪಡುವದು.

ಹೆಚ್. ಹೆಚ್. ಸ್ಪಾರ್ಕಸ್,
ಸೂಪರಿಟೆಂಡೆಂಟ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 9ನೇ ಜುಲೈ 1885.

ಸ್ವ 1884—85ನೇ ಇಸವಿಯ ಬಡ್ಡಿ ಪೈಸಲ್ ಬಗ್ಯೆ ತಮ್ಮತಮ್ಮ ಪ್ಯಾಸ್ ಬುಕ್ಕುಗಳನ್ನು ಸಾಧ್ಯವಾದ ಮಟ್ಟಿಗೆ ಜಾಗ್ರತೆಯಲ್ಲಿ ಹಾಜರ್ಮಾಡಬೇಕೆಂದು ಕೋಲಾರ ಡಿಸ್ಟ್ರಿಕ್ಟು ಗವರ್ನಮೆಂಟ್ ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್‌ದಾರರುಗಳು ಇದರಿಂದ ಕೋರಲ್ಪಟ್ಟಿರುತ್ತಾರೆ.

ಎ. ಚೆಲುವಯ್ಯಂಗಾರ್,
ಟ್ರೆಜರೀ ಆಫೀಸರ್.

ತಾರೀಖು 30ನೇ ಜುಲೈ 1885.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಗೋರಿಬಿನೂರು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಈ ಕೆಳಗೆ ವಿವರಿಸಿರುವ ರಿಜಿಸ್ಟ್ರಿಯ ತಂಸೂಕು ಬೇವಾರಸಾಗಿ ನಿಂತಿರುತ್ತ, ಅದನ್ನ ಹಾಜರ್ಮಾಡಿದವರೆ ಆಗಲಿ ಅದರಲ್ಲಿ ಬಾಧ್ಯತೆ ವುಳ್ಳವರೇ ಆಗಲಿ ಈ ಲಾಗಾಯತು 1 ತಿಂಗಳೊಳಗಾಗಿ ಡಿಟೋ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಹಾಜರಾಗಿ ವಾಜಬಿ ಫೀಜು ಪಾವತೀ ಮಾಡಿ ವಾಪಸು ಪಡಿಯಬಹುದು, ತಪ್ಪಿದರೆ ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ಅದು ನಾಶವಾಗಿಹೋಗುವದು.

ಆಪ್ತಿಯಾದ ಆಫೀಸ್.	ಬುಕ್ಕಿನ ಮತ್ತು ತಂಸೂಕಿನ ನಂಬರ್.	ಕಕ್ಷಿಗಾರರ ಹೆಸರು.		ತಂಸೂಕಿನ ತಾರೀಖು.	ರಿಜಿಸ್ಟ್ರಿಗೆ ಹಾಜರ್ಮಾಡಿದ ತಾರೀಖು.	ರಿಜಿಸ್ಟ್ರಿದ ತಾರೀಖು.	ತಂಸೂಕಿನ ಸ್ವಭಾವ ಮತ್ತು ಕಿಮ್ಮತ್ತು.
		ತಂಸೂಕು ಬದಮಕೊಟ್ಟವನ ಹೆಸರು ಮತ್ತು ವಾಸಸ್ಥಳ.	ಬರಸಿಕೊಂಡವನ ಹೆಸರು ಮತ್ತು ವಾಸಸ್ಥಳ.				
ಗೋಪಿದೊಡ್ಡಹೂರು ಸಬ್ ರಿಜಿಸ್ಟ್ರಾರ್ ಆಫೀಸ್.	1ನೇ ಬುಕ್ಕು 1883-84ನೆ ಇಸವಿ ನಂಬರ್ 44	ಮಂಜೇನಹಳ್ಳಿಲಿರುವ ಶಾನುಭಾಗ ರಾಮುವ ಚಿಕ್ಕಕೃಷ್ಣಪ್ಪನ ಕೃಷ್ಣಪ್ಪ	ಯಿದೇ ಗ್ರಾಮದಲ್ಲಿರುವ ಚಿಕ್ಕರಿಬಸಪ್ಪನ	1883ನೇ ಇಸವಿ ಜೂನ್ ತಾ|| 1	1883ನೇ ಇಸವಿ ಜೂನ್ ತಾ|| 27	ಜಿಟೋ ಜಿಟೋ	ಮಂಜೇನಹಳ್ಳಿ ಗ್ರಾಮದಲ್ಲಿ ಇರುವ ಮೂಗಿ ಮನೆ ಕಟ್ಟಿದ ಅಂಕಣ 27½ ಪುಳ್ಳ ಮನೆ 160 ರೂಪಾಯಿಗಳಿಗೆ ಕ್ರಯ ಮಾಡಿರುವದಾಗಿ.

ಎ. ಚಲುವಯ್ಯಂಗಾರ್,
ಫಾರ್ ರಿಜಿಸ್ಟ್ರಾರ್.

ತುಮಕೂರು ಡಿಸ್ಟ್ರಿಕ್ಟು.

ತಾರೀಖು 1ನೇ ಆಗಸ್ಟ್ ೧೮೮೫.

ತುಮಕೂರಲ್ಲಿ ಇರುವ ಮೈಸೂರು ಗವರ್ನಮೆಂಟ್ ಸೇವಿಂಗ್ಸ್ ಬ್ಯಾಂಕಿನ ಡಿಪಾಜಿಟ್‌ದಾರ್ರುಗಳು ಸ್ ೧೮೮೫ನೇ ಇಸವಿ ಮಾರ್ಚೀ 31ನೇ ಮುಕ್ತಂವರಿಗೆ ಆಗುವ ಬಡ್ಡೀ ಫೈಸಲಾತಿಗೋಸ್ಕರ ತಮ್ಮತಮ್ಮ ಪ್ಯಾಸ್ ಬುಕ್ಕುಗಳನ್ನು ತುಮಕೂರು ಡಿಸ್ಟ್ರಿಕ್ಟು ಪಿಜಾನೆಯಲ್ಲಿ ಪಾಜರ್ಮಾಡುವಂತೆ ಇವರ ದೆಸೆಯಿಂದ ಕೋರಲ್ಪಟ್ಟಿದ್ದಾರೆ.

ಎ. ಕೃಷ್ಣರಾವ್,
ಫಾರ್ ಡೆಪ್ಯುಟಿ ಕಮ್ಮಿಷನರ್, ಟ್ರೆಜರೀ ಇಲಾಖಾ.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜೀಯವರ ಕೋರ್ಟಿನಲ್ಲಿ.

1885ನೇ ಇಸವಿ ಅರ್ಜೀ ನಂಬರ್ 325.

ಮೃತಪಟ್ಟ ಬೇಟೇಗೌಡರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ದ್ಯಾವಂಣ, ಮೃತಪಟ್ಟ ಸದರೀ ಬೇಟೇಗೌಡರಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಮಂಡಿ ಮೊಹಲಾ ಸ್ಥಳದ ಸದರೀ ದ್ಯಾವಂಣ, ಸದರೀ ವಾಸಸ್ಥನಾಗಿ ಮೃತಪಟ್ಟ ಬೇಟೇಗವ್ವಡರ ಜೆಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ದ್ಯಾವಂಣನ ಅರ್ಜೀಯನ್ನು 1885ನೇ ಇಸವಿ ಆಗಸ್ಟ್ ತಿಂಗಳು ತಾರೀಖು 18ರಲ್ಲು ಕೇಳಿ ಸರ್ಟಿಫಿಕೆಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಸೆಮಾಡಲ್ಪಡುತ್ತೆ. ಆಕಾಲದಲ್ಲಿ ಸದರೀ ಮೃತಪಟ್ಟ ಬೇಟೇಗವ್ವಡರ ಆಸ್ತಿಗೆ ಹಕ್ಕುದಾರರಾದ ವಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1885ನೇ ಇಸವಿ ಅರ್ಜೀ ನಂಬರ್ 327.

ಮೃತಪಟ್ಟ ಗೌಸಸಾಹೇಬರ ಆಸ್ತೀ ವಿಷಯದಲ್ಲಿ—

ಅರ್ಜೀದಾರ-ಖಾಸಿಂಬೀ, ಮೃತಪಟ್ಟ ಸದರೀ ಗೌಸಸಾಹೇಬರಿಗೆ ಮಗಳು ಆಗಬೇಕೆಂಬ ಹಕ್ಕುದಾರೀ ಮೇಲೆ ತಿರಮಕೂಡ್ಲು ನರಸಿಪುರ ತಾಲ್ಲೂಕು ಯಿಡಾಳು ಸ್ಥಳದ ಸದರೀ ಖಾಸಿಂಬೀ ಸದರೀ ವಾಸಸ್ಥನಾಗಿ ಮೃತಪಟ್ಟ ಗೌಸಸಾಹೇಬರ ಜೆಂದಗಿ ಬಗ್ಯಾಗಿ ಬರತಕ್ಕ